# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ, ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆಃ 785/2025

**ಪಿ.ಡಬ್ಲ್ಯೂಃ1 (ಸಿಡಬ್ಲ್ಯೂಃ 1)**

| | | |
|---|---|---|
| **ಸಾಕ್ಷಿದಾರರ ಹೆಸರು** | **:** | **ಶ್ರೀ ವಲಿಬಾಷ** |
| **ತಂದೆಯ ಹೆಸರು** | **:** | **ಮೆಹಬೂಬ್ ಸಾಬ್** |
| **ವಯಸ್ಸು** | **:** | **57 ವರ್ಷ** |
| **ಕೆಲಸ** | **:** | **ಪಿ.ಎಸ್.ಐ., ಎಪಿಎಂಸಿ ಪೊಲೀಸ್ ಠಾಣೆ** |
| **ವಾಸ ಸ್ಥಳ** | **:** | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕ 26.03.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ3.10.2023 ರಿಂದ ದಿಃ13.10.2025 ರ ವರೆಗೆ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ದಿಃ9.5.2025 ರಂದು ಬೆಳಗಿನ ಜಾವ ನನ್ನ ಸಿಬ್ಬಂದಿಗಳೊಂದಿಗೆ ಗಸ್ತು ಕರ್ತವ್ಯದಲ್ಲಿದ್ದಾಗ ಸಂಡೂರು ತಾಲೂಕಿನ ಮಾಳಾಪುರ ಗ್ರಾಮದಿಂದ ಅಕ್ರಮವಾಗಿ ಗಾಂಜಾವನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ಸದರಿ ಮಾಹಿತಿಯನ್ನು ಖಚಿತಪಡಿಸಿಕೊಂಡು ಠಾಣೆಗೆ ಬಂದು ದೂರು ದಾಖಲು ಮಾಡಿರುತ್ತೇನೆ. ದೂರನ್ನು **ನಿಪಿ.1** ಎಂದು ಸಾಕ್ಷಿಯ ಸಹಿಯನ್ನು **ನಿಪಿ.1 ಎ** ಎಂದು ಗುರುತಿಸಲಾಯಿತು.

**Spl.C.No.785/2025**
**P.W.1 (C.W1.)**
**Date : 26.03.2026**

**3.** ಆ ನಂತರ ಇಬ್ಬರು ಪಂಚರನ್ನು ಬರಮಾಡಿಕೊಂಡು ನಾನು , ಸಿಬ್ಬಂದಿಗಳು ಕೂಡಿಕೊಂಡು ಮಃ1.30 ಗಂಟೆಗೆ ಠಾಣೆಯನ್ನು ಬಿಟ್ಟು ಮಾಹಿತಿ ಬಂದ ಸ್ಥಳ ಮಃ2.00 ಗಂಟೆಗೆ ತಲುಪಿರುತ್ತೇವೆ. ಮಾಹಿತಿ ಬಂದ ಸ್ಥಳ ದಲ್ಲಿ ನಾವು ಕಾಯುತ್ತಿದ್ದಾಗ ಮಃ2.45 ಗಂಟೆಗೆ ಇಬ್ಬರು ವ್ಯಕ್ತಿಗಳು ಬೆಳಗಲ್ ಗ್ರಾಮದ ಕಡೆಯಿಂದ ಬರುತ್ತಿದ್ದು ಒಬ್ಬ ವ್ಯಕ್ತಿಯ ಕೈಯಲ್ಲಿಒಂದು ಚೀಲ ಇತ್ತು. ಅವರುಗಳು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದಾಗ ನಾವು ಅವರನ್ನು ಹಿಡಿದುಕೊಂಡಿರುತ್ತೇವೆ. ಚೀಲದಲ್ಲಿ ಏನು ಇದೆ ಎಂದು ಕೇಳಿದಾಗ ಜೋಳ ಇದೆ ಎಂದು ತಿಳಿಸಿದರು. ಆದರೆ ನಮಗೆ ಸಂಶಯ ಬಂದು ಚೀಲದಿಂದ ಗಾಂಜಾದ ವಾಸನೆ ಬರುತ್ತಿತ್ತು. ಅವರ ಹೆಸರು ವಿಳಾಸ ಕೇಳಲಾಗಿ ಚೀಲ ಹಿಡಿದುಕೊಂಡ ವ್ಯಕ್ತಿಯ ಹೆಸರು ತಿಪ್ಪಯ್ಯ ಎಂದು ಮತ್ತು ಇನ್ನೊಬ್ಬನ ಹೆಸರು ಕೃಷ್ಣ ಎಂದು ತಿಳಿಸಿದರು.

**4.** ಡಿವೈ ಎಸ್ ಪಿ ರವರು ತಮ್ಮನ್ನು ಸದರಿ ವ್ಯಕ್ತಿಗಳಿಗೆ ಪರಿಚಯ ಮಾಡಿಕೊಂಡು ನಿಮ್ಮ ಅಂಗಶೋಧನೆ ಮಾಡಬೇಕಾಗಿದೆ ನಾನೇ ಮಾಡಬಹುದಾ ಅಥವಾ ಬೇರೆ ಪತ್ರಾಂಕಿತ ಅಧಿಕಾರಿ ಮಾಡಬಹುದಾ ಎಂದುನೋಟಿಸ್ ನೀಡಿದ್ದು ಸದರಿ ವ್ಯಕ್ತಿಗಳು ಒಪ್ಪಿಗೆ ಕೊಟ್ಟ ನಂತರ ಸದರಿ ವ್ಯಕ್ತಿಗಳ ಅಂಗಶೋಧನೆ ಮಾಡಲಾಯಿತು ಆದರೆ ಯಾವುದೇ ವಸ್ತುಗಳು ದೊರೆಯಲಿಲ್ಲ. ಅವರ ಕೈಯಲ್ಲಿದ್ದ ಚೀಲವನ್ನು ಪರಿಶೀಲಿಸಿದಾಗ ಸದರಿ ಚೀಲದಲ್ಲಿ ಬೀಜ , ಹೂವು ಮತ್ತು ಎಲೆ ಮಿಶ್ರಿತ ಗಾಂಜಾ ಕಂಡು ಬಂತು. ಸದರಿ ಗಾಂಜಾವನ್ನು ಎಲ್ಲಿಂದ ತಂದಿದ್ದೀರಿ ಎಂದು ಕೇಳಲಾಗಿ ಗುಂಟಕಲ್ ನಿಂದ ಗಾಂಜಾ ತಂದಿದ್ದು ಬಳ್ಳಾರಿಯಲ್ಲಿ ಮಾರಾಟ ಮಾಡಿ ಹಣವನ್ನು ಹಂಚಿಕೊಳ್ಳುವ ಉದ್ದೇಶ ಹೊಂದಿರುವುದಾಗಿ ತಿಳಿಸಿದರು. ಗಾಂಜಾವನ್ನು ಚೀಲ ಸಮೇತ ತೂಕ ಮಾಡಲಾಗಿ ಅದು 1 ಕೆಜಿ 115 ಗ್ರಾಂ ತೂಕ ಬಂತು. ಸದರಿ ಗಾಂಜಾವನ್ನು ,ಚೀಲ ಸಮೇತ ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಇಟ್ಟು ಪ್ಯಾಕ್ ಮಾಡಿ ಸೀಲ್ ಮಾಡಿರುಎತ್ತೇವೆ. ಪುನಃ ತೂಕ

ಮಾಡಿದಾಗ 1 ಕೆಜಿ 215 ಗ್ರಾಂ ತೂಕ ಬಂದಿರುತ್ತದೆ. ಅದರ ಅಂದಾಜು ಬೆಲೆ ರೂ.1,20,000/ ಇರಬಹುದು. ಗಾಂಜಾವನ್ನು ಅಮಾನತ್ತುಪಡಿಸಿಕೊಂಡು ಸ್ಥಳದಲ್ಲಿ ಪಂಚನಾಮೆ ಬರೆಯಲಾಯಿತು. ಪಂಚನಾಮೆಯನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು **ನಿಪಿ.2 ಎ** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಫೋಟೋ ತೆಗೆದಿದ್ದು ಫೋಟೋ ವನ್ನು **ನಿಪಿ.3** ಎಂದು ಗುರತಿಸಲಾಯಿತು. ಪಂಚನಾಮೆ ಕಾಲಕ್ಕೆ ವೀಡಿಯೋ ಚಿತ್ರೀಕರಣ ಮಾಡಿಕೊಳ್ಳಲಾಯಿತು. ಸಿಡಿಯನ್ನು **ನಿಪಿ.4** ಎಂದು ಗುರುತಿಸಲಾಯಿತು.

5. ನಂತರ ಆರೋಪಿಗಳು ಮತ್ತು ಮಾಲು ಸಮೇತ ಠಾಣೆಗೆ ಬಂದಿರುತ್ತೇವೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಗುರುತಿಸಿರುತ್ತಾರೆ.

## ಪಾಟೀ ಸವಾಲುಃ ಶ್ರೀ ಜಿ.ಎಂ.ಆರ್ಃ ವಕೀಲರು ಆರೋಪಿತರ ಪರಃ

**6.** ಬಾತ್ಮಿ ಬಂದ ಮಾಹಿತಿಯನ್ನು ಕೂಡಲೇ ನಾವು ಮೇಲಾಧಿಕಾರಿಗೆ ತಿಳಿಸಿಲ್ಲ ಎನ್ನುವುದು ಸರಿಯಲ್ಲ. ಆರೋಪಿ ತಿಪ್ಪಯ್ಯನ ಕೈಯಲ್ಲಿ ಚೀಲ ಇತ್ತು. ತಿಪ್ಪಯ್ಯನ ಕೈಯಲ್ಲಿ ಚೀಲ ಇತ್ತು ಎಂದು ಪಂಚನಾಮೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ. ಆರೋಪಿಗಳು ತಾವು ಎಲ್ಲಿಂದ ಬಂದಿದ್ದೇವೆ ಎಂದು ಹೇಳಿಲ್ಲ ಎನ್ನುವುದು ಸರಿಯಲ್ಲ. ನಿಪಿ.3 ಫೋಟೋ ದಲ್ಲಿ ಚೀಲವನ್ನು ತೂಕದ ಯಂತ್ರದ ಮೇಲೆ ಇಟ್ಟು ತೂಕ ಮಾಡುತ್ತಿರುವುದು ಕಂಡು ಬರುತ್ತಿಲ್ಲ ಎನ್ನುವುದು ಸರಿ . ಯಾವ ಕಂಪನಿಯ ಮೊಬೈಲ್ ನಿಂದ ಫೋಟೋ ತೆಗೆಯಲಾಯಿತು ಎಂದು ಪಂಚನಾಮೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ. ಪಂಚನಾಮೆಯನ್ನು ಎ ಎಸ್ ಐ

**Spl.C.No.785/2025**
**P.W.1 (C.W1.)**
**Date : 26.03.2026**

ತಿಪ್ಪೆರುದ್ರಪ್ಪ ರವರು ಲ್ಯಾಪಟಾಪ್ ಮೂಲಕ ಟೈಪ್ ಮಾಡಿರುತ್ತಾರೆ. ಈ ವಿಷಯವನ್ನು ಪಂಚನಾಮೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ.

7. ಚೀಲವನ್ನು ಜಪ್ತುಮಾಡಿಲ್ಲ ಎನ್ನುವುದು ಸರಿಯಲ್ಲ. ನಾನು ದಾಳಿಯಲ್ಲಿ ಭಾಗವಹಿಸಿಲ್ಲ ಎನ್ನುವುದು ಸರಿಯಲ್ಲ. ಅಂಕಿ ಅಂಶಕ್ಕಾಗಿ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**